ಮಕ್ಕಳ ದೃಷ್ಟಿಯಲ್ಲಿ ಹಾಗೂ ದೊಡ್ಡವರ ಮಾತುಗಳಲ್ಲಿ ನಿಧಾನವಾಗಿ ಬಿಡಿಸಿಕೊಂಡಿತು ಒಂದು ಪ್ರೇಮಕತೆ, 'ಹೋಯ್ ನಾ ಬರ್ಕಾ ಹೇಳಿಕೊಡೂಕೆ?' ಈಜು ಕಲಿಸಲು ಬರುವ ಚಿಕ್ಕಪ್ಪಯ್ಯ, 'ನೀವಿಗ. ಹೋತ್ರಿಯಾ ಇಲ್ದಾ?' ಹುಸಿಕೋಪ ತೋರುವ ಜಲಜ. 'ಅವಳ ಅವತಾರಕ್ಕಿಷ್ಟು! ನಾಚ್ಕೆ ಮರ್ಯಾದಿ ಚೂರ್ ಕೇಣ್ ಬೇಡ.' ಮೂದಲಿಸುವ ದೊಡ್ಡತ್ತೆ. 'ಇದೊಂದು ಪೆದ್ದು, ಅವರೇನು ಗಂಡಹೆಂಡ್ರಾ ಹಾಂಗೆ ಹೋಪುಕೆ?' ಎಂದು ನರ್ಮದೆಯ ತಲೆಗೆ ಕುಟ್ಟಿ ಹಿರಿತನ ಬೀರಿದ ಲಕ್ತಿಯ ಬಾಯಿಯಲ್ಲೇ ಮುಂದೆ ವರ್ಷಗಳ ಬಳಿಕ, 'ಈಗ ಎಣ್ಸಿದ್ರೆ ನಿಜವಾದ ಗಂಡ ಹೆಂಡತಿಯರು ಅಷ್ಟು ಪ್ರೀತಿಯಲ್ಲಿ ಇರಲಿಕ್ಕಿಲ್ಲ ಅಂತ ಕಾಣತ್ತಲ್ವ?' ಎಂದು ಹೇಳಿಸುವಲ್ಲಿ, ಬದಲಾದ ಕಾಲ ಮತ್ತು ಸಂವೇದನೆಗಳ ಪ್ರಭಾವವಿದೆ. ಕಥಾಹಂದರದ ಭಾವಸ್ಫುರಣಕ್ಕೆ ಇನ್ನಷ್ಟು ಒತ್ತುಕೊಡುವಂತೆ, ಕತೆಯ ಕೊನೆಯಲ್ಲಿ ನರ್ಮದೆಗೆ 'ಬಾಲ್ಯದ ನೆನಪುಗಳು' ಉಕ್ಕಿ ಬಂದು, 'ಬಾಯಿ ತೆರೆದದ್ದೇ ಆದರೆ ಕಣ್ಣೀರು ಧುಮುಕಿಬಿಡುವ'ಷ್ಟಾಗುತ್ತದೆ.

ಬಹಳವಾಗಿ ಕಾಡಿದ ಇನ್ನೊಂದು ಕತೆ 'ಹೂವಿನ ಪೂಜೆ'. ಗೆಳತಿಯರಿಬ್ಬರ 'ಪ್ರೇಮಕತೆ'ಯನ್ನು ಬರೆಯಲು ಹೊರಟದ್ದು ಅದೊಂದು ಅಪೂರ್ವ ಅನುಭವವಾಯ್ತು. ಬರವಣಿಗೆಯುದ್ದಕ್ಕೂ ಅಂತಹ ಸಂಬಂಧವನ್ನೂ, ಅಲ್ಲಿನ ಪಾತ್ರಗಳನ್ನೂ ಪ್ರೀತಿ, ಗೌರವಗಳಿಂದ ಕಾಣಬೇಕೆಂಬ ಕಾಳಜಿ ನನ್ನದು. ವರುಷ ಕಾಲ ಕತೆಯು ನನ್ನೊಳಗೆ ಬೆಳೆಯುತ್ತಿತ್ತು. ಪಾತ್ರಗಳನ್ನು ಸೂಕ್ಷ್ಮ ವಿಶ್ಲೇಷಣೆಗೆ ಒಳಪಡಿಸುತ್ತ ನಡೆದಂತೆ, ಸಂಬಂಧಗಳನ್ನು ಅರ್ಥ ಮಾಡಿಕೊಳ್ಳುತ್ತ ಹೋಗುವುದು ಸಾಧ್ಯವಾಯಿತು. ಕತೆ ಬರೆಯುವುದೆಂದರೆ, ಅದೊಂದು ಶೋಧ, ಒಂದು ವಿಶ್ಲೇಷಣೆ, ಒಂದು ದರ್ಶನ. ತನ್ಮೂಲಕ ನಾವಿರುವ ಲೋಕವನ್ನು ಹೆಚ್ಚು ಆಳವಾಗಿ ಅರಿಯಬಹುದೆಂಬುದು ನನ್ನ ಅನುಭವ. ಇಲ್ಲಿಯೂ ಸಂಬಂಧಿತ ವ್ಯಕ್ತಿಗಳ ಬಾಯಲ್ಲಿ ಬರುವ ಮಾತುಗಳೇ ಪಾತ್ರಗಳ ಬಗ್ಗೆ ಒಳನೋಟ ಕೊಡುತ್ತ ಕತೆಯನ್ನು ಬೆಳೆಸಿಕೊಂಡು ಹೋಗುವಂತೆ ಚಿತ್ರಿಸಿದ್ದೇನೆ. ಕೊನೆಯಲ್ಲಿ ಮಿತಭಾಷಿಯಾದ ಮಾವಯ್ಯ ಹೇಳುವ, 'ಅವರಷ್ಟಕ್ಕೆ ಅವು ಇರ್ ತಿದ್ದೊ... ಎಲ್ಲ ಒಂದೊಂದು ಕಾಲ,' ಎಂದ ಮಾತು ಬಾಗಿಲ ಹೊರಗಿನಿಂದ ತೇಲಿಕೊಂಡು, ನಿರ್ಮಲತ್ತೆಯ ಮಾತುಗಳೆಡೆಯಿಂದ ತೂರಿ ಬಂದು ತಟ್ಟುವಂತಾಗುತ್ತದೆ.

ನನ್ನ ಮಟ್ಟಿಗೆ, ಕತೆ ಹೆಣೆಯುವುದೆಂದರೆ ಒಂದು ಸುದೀರ್ಘ ಪಯಣ. ತತ್ಕ್ಷಣ ಕತೆ ಬರೆದು ಕೊಡಬೇಕೆಂದರೆ ನನ್ನಿಂದಾಗದು; ಕತೆಯ ಪಾತ್ರಗಳನ್ನು ಎಷ್ಟೊಂದು ತೀವ್ರವಾಗಿ ಅನುಭವಿಸಬೇಕಾಗುತ್ತದೆಂದರೆ, ಕತೆ ಬರೆಯುವಷ್ಟು ಕಾಲ ಸ್ವತಃ ಆ ಪಾತ್ರವೇ ಆಗಿಬಿಟ್ಟಿರುತ್ತೇನೆ. ಹೀಗೆ ಪಾತ್ರವೊಂದು ನನ್ನೊಳಗೆ ಬೀಡು ಬಿಟ್ಟಾಗ ಮಾತ್ರ, ನನಗೆ ಅದರ ಪ್ರತಿಯೊಂದು ಚಲನವಲನ, ನಡವಳಿಕೆಗಳ ಬಗ್ಗೆ ಖಾತ್ರಿಯಿರುತ್ತದೆ. ಇಂತಿಂಥ ಸಂದರ್ಭದಲ್ಲಿ ಆ ಪಾತ್ರ ಹೇಗೆ ವರ್ತಿಸಬಹುದು, ಬೇರೊಂದು ಸಂದರ್ಭದಲ್ಲಿ ಏನು ಮಾತಾಡಬಹುದು, ಇತ್ಯಾದಿ.

ಸಣ್ಣ ಕತೆಯೆಂಬುದು ಸಾಹಿತ್ಯ ಪ್ರಕಾರಗಳಲ್ಲೇ ಅತ್ಯಂತ ಸೂಕ್ಷ್ಮವಾದ ಮತ್ತು ಅತ್ಯಂತ ಕಲಾತ್ಮಕವಾದ ಅಭಿವ್ಯಕ್ತಿ. ಅದರ ಕಟ್ಟೋಣ ತುಂಬ ನಾಜೂಕು. ಯಾವುದೇ ಒಂದು ಅಂಶ ಸೋತರೂ ಕಟ್ಟಡ ಬಿದ್ದುಬಿಡಬಹುದು. ಅಲ್ಲಿ ಒಂದು ಪಾತ್ರ, ಒಂದು ಮಾತು, ಯಾಕೆ, ಒಂದು ಶಬ್ದ ಹೆಚ್ಚಾದರೂ ಕತೆಯ ಅಂದ ಕೆಟ್ಟುಬಿಡುವುದಿದೆ. ಪಾತ್ರಗಳನ್ನು ಕುಂಚದ ಕೆಲವೇ ಗೆರೆಗಳಲ್ಲಿ ಬಿಡಿಸಬೇಕಾಗುತ್ತದೆ; ಕತೆಯ ಆರಂಭ ಮತ್ತು ಕೊನೆ ಇವುಗಳ ನಡುವೆ ಬಿಗಿಯಾದ ಬಂಧವಿರಬೇಕಾಗುತ್ತದೆ.